**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಬಾ ಹುಕ್ಕೇರಿ ಇವರು ನಿಯಮ 72ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 151 ಕ್ಕೆ ಮಾನ್ಯ ಇಂಧನ ಸಚಿವರ ಉತ್ತರ</u>**

**ವಿಷಯ:** ನೇಕಾರರ ವಿದ್ಯುತ್ ಮಗ್ಗ ಘಟಕಗಳಿಗೆ ಸರಬರಾಜು ಮಾಡುತ್ತಿದ್ದ ವಿದ್ಯುತ್ ದರವನ್ನು ಏಕಾಏಕಿ ಹೆಚ್ಚಿಸಿರುವುದರಿಂದ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಮತ್ತು ನಿಪ್ಪಾಣಿ ತಾಲ್ಲೂಕುಗಳ 762 ವಿದ್ಯುತ್ ಮಗ್ಗ ಘಟಕಗಳ ಸುಮಾರು 22,000 ಜನ ನೇಕಾರರು ಕಾರ್ಮಿಕರು ಅನುಭವಿಸುತ್ತಿರುವ ತೊಂದರೆಗಳ ಬಗ್ಗೆ.

* * * * *

ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶ ದಿನಾಂಕ: 12.05.2023 ರ ಪ್ರಕಾರ ದಿನಾಂಕ: 01.04.2023 ರಿಂದ ಅಥವಾ ತದನಂತರದ ಮೊದಲ ಮಾಪಕ ಓದುವ ದಿನಾಂಕದಿಂದ ಬಳಸುವ ವಿದ್ಯುತ್ ಗೆ ದರ ಪರಿಷ್ಕರಿಸಲಾಗಿದೆ.

ಪರಿಷ್ಕೃತ ದರವು ದಿನಾಂಕ: 01.04.2023 ರಿಂದ ಪೂರ್ವಾನ್ವಯವಾಗಿರುವುದರಿಂದ, ಏಪ್ರಿಲ್ 2023 ರ ಬಳಕೆಗೆ ಅನ್ವಯವಾಗುವ ವ್ಯತ್ಯಾಸದ ಮೊತ್ತವನ್ನು ಜೂನ್ 2023 ತಿಂಗಳಿನಲ್ಲಿ ಹೆಚ್ಚುವರಿಯಾಗಿ ಡಿಮಾಂಡ್ ಮಾಡಿರುವುದರಿಂದ ಹೆಚ್ಚಿನ ಮೊತ್ತ ಬಂದಿರುತ್ತದೆ.

ಕೆ.ಇ.ಆರ್.ಸಿ. (ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ಶುಲ್ಕ) (ಮೊದಲನೇ ತಿದ್ದುಪಡಿ) ನಿಯಮಾವಳಿಗಳು 2023ರ ಪ್ರಕಾರ ಫೆಬ್ರವರಿ 2023 ರಿಂದ ಏಪ್ರಿಲ್ 2023 ರವರೆಗಿನ ಅವಧಿಯ ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ಶುಲ್ಕ ರೂ.2.55 ಪ್ರತಿ ಯೂನಿಟ್ ಗೆ ವಿಧಿಸಿರುವುದರಿಂದ ಹೆಚ್ಚಿನ ಮೊತ್ತ ಬಂದಿರುತ್ತದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಪಾಕೈ 70 ಜಕೈಇ 2004 ದಿನಾಂಕ: 09.11.2004 ಮತ್ತು ಆದೇಶ ಸಂಖ್ಯೆ: ಪಾಕೈ 70 ಜಕೈಇ 2006 ದಿನಾಂಕ: 16.09.2006 ರ ಅನುಸಾರ 20 ಹೆಚ್ ಪಿ ವರೆಗಿನ ಸ್ಥಾವರಗಳಿಗೆ ಒಂದು ಯೂನಿಟ್‌ಗೆ ರೂ.1.25ಗಳ ದರ ನಿಗದಿಪಡಿಸಿ ಹಾಲಿ ಜಾರಿಯಲ್ಲಿರುವ ವಿದ್ಯುತ್ ದರ ಹಾಗೂ ಸಬ್ಸಿಡಿ ದರ ಇವುಗಳ ವ್ಯತ್ಯಾಸದ ಮೊತ್ತವನ್ನು ಹೆಸ್ಕಾಂಗೆ ಸರ್ಕಾರ ಪಾವತಿಸಲು ಆದೇಶಿಸಲಾಗಿದೆ.

ಅದರಂತೆ, ನಿಗದಿತ ಜಕಾತಿ ದರಗಳನ್ವಯ ತಯಾರಿಸಿದ ಒಟ್ಟಾರೆ ಬಿಲ್ಲಿನಲ್ಲಿ ಪ್ರತಿ ಯುನಿಟ್‌ಗೆ ರೂ.1.25 ರಂತೆ ರಿಯಾಯತಿ ದರದಲ್ಲಿ ಕೈಮಗ್ಗ ಗ್ರಾಹಕರು ಪಾವತಿಸಬೇಕಾಗಿರುತ್ತದೆ ಹಾಗೂ ಉಳಿದ ಮೊತ್ತವನ್ನು ಸರ್ಕಾರವು ಸಹಾಯಧನದ ರೂಪದಲ್ಲಿ ಹೆಸ್ಕಾಂ ಕಂಪನಿಗೆ ಭರಿಸಲಾಗುವುದು.

ಸಂಖ್ಯೆ: ಎನರ್ಜಿ 164 ಇಬಿಎಸ್ 2023

(ಕೆ.ಜೆ.ಜಾರ್ಜ್)
ಇಂಧನ ಸಚಿವರು